

ಡಾ.ವಿನೋದ ಛೆಬ್ಬಿ

ಕಾಮಕೂಟವನ್ನು ಸಂತಾನೋತ್ಪತ್ತಿ ಹಾಗೂ ಕೌಟುಂಬಿಕ ಹೊಣೆಗಾರಿಕೆಯಿಂದ ಬೇರ್ಪಡಿಸಿ ಅನುಭವಿಸಲು ಗಂಭೀರ ಚಿಂತನೆ ನಡೆಸಬೇಕಾದ ಕಾಲ ಬಂದಿದೆ.

# 341: ಹೊಸ ದಾರಿ -81

ಒಂಟಿ ಹೆಂಗಸರು ಇಳಿವಯಸ್ಸಿನಲ್ಲಾದರೂ ಸರಿ, ಸುಖಪಡುವುದು ಬದುಕಿನ ಸಾರ್ಥಕತೆಗೆ ಅಗತ್ಯ ಎಂದು ಹೇಳುತ್ತಿದ್ದೆ. ಇದಕ್ಕೆ ಸ್ಪಂದಿಸಿ ಮಹಿಳೆಯೊಬ್ಬರು ಇದಕ್ಕಿನ್ನೂ ಕಾಲ ಪಕ್ವವಾಗಿಲ್ಲ ಎಂದಿದ್ದನ್ನು ಹೋದಸಲ ಹೇಳಿದ್ದೆ. ಕಾಲದ ಬಗೆಗೆ ವಿಸ್ಮಯಪಡುತ್ತಿರುವಾಗ ನೆನಪಾದ ಕಾಲಾತೀತ ಮಹಿಳೆಯನ್ನು ನಿಮಗೆ ಪರಿಚಯಿಸಬೇಕು ಎನ್ನಿಸುತ್ತಿದೆ.

ನಾನು ಹದಿನಾಲ್ಕರಲ್ಲಿ ಇರುವಾಗ ನಮ್ಮಪ್ಪ–ಅಮ್ಮ ಆಡಿಕೊಳ್ಳುತ್ತಿದ್ದ ಆಡುತ್ತಿದ್ದ ಪಿಸುಮಾತುಗಳನ್ನು ಕದ್ದು ಕೇಳಿದ್ದೆ. ದೂರದ ಸಂಬಂಧಿ ಅವಿವಾಹಿತ ಹುಡುಗಿಯೊಬ್ಬಳು (ನನಗಿಂತ ಮೂರು ವರ್ಷ ದೊಡ್ಡವಳು) ಗರ್ಭಿಣಿಯಾದ 'ಅನಾಹುತ ರಹಸ್ಯ' ಅದರಲ್ಲಿತ್ತು. ಹಿರಿಯರು ಹೇಗೋ ಆಕೆಯ ಗರ್ಭಪಾತ ಮಾಡಿಸಿ, ನಂತರ ಗಡಿಬಿಡಿಯ ವಿವಾಹದ ಹರಸಾಹಸ ನಡೆಸಿದ್ದರು. ಮೂರೂವರೆ ದಶಕಗಳ ನಂತರ ಆಕೆಯ ಮನೆಗೆ ಹೋದಾಗ ತನ್ನ ಬೆಳೆದ ಮಕ್ಕಳನ್ನು ಪರಿಚಯಿಸಿದ್ದು ನೆನಪಿದೆ. ಆಕೆ ಐವತ್ತೆರಡರಲ್ಲಿ ಇರುವಾಗ ಗಂಡ ತೀರಿಕೊಂಡ ಸುದ್ದಿ ಬಂತು. ಇನ್ನೆರಡು ವರ್ಷಗಳ ನಂತರ ಮಳಿಗೆಯೊಂದರಲ್ಲಿ ಅಕಸ್ಮಾತ್ತಾಗಿ ಎದುರಾದಳು. ಗಂಡನ ಸಾವಿಗೆ ಸಂತಾಪ ಸೂಚಿಸಬೇಕೆಂದವನು ಆಕೆ ನಳನಳಿಸುತ್ತಿದ್ದುದನ್ನು ಕಂಡು ಗೊಂದಲಕ್ಕೊಳಗಾದೆ. ಆಕೆಯೇ ಮುಂದುವರಿದು, ಜೊತೆಗಿದ್ದ ಬಂಧುವೊಬ್ಬನನ್ನು ಅಭಿಮಾನದಿಂದ ಪರಿಚಯಿಸಿದಳು. ಆಗ ಅವರಿಬ್ಬರೂ ದೃಷ್ಟಿ ವಿನಿಮಯಿಸಿದ್ದು ನನ್ನ ಮನದಲ್ಲಿ ಅಚ್ಚೊತ್ತಿದಂತಿದೆ. ಈಗವಳು ಬದುಕಿದ್ದಾಳೋ ಗೊತ್ತಿಲ್ಲ. ಅವಳ ಬಗೆಗೆ ಯಾಕೆ ಹೇಳುತ್ತಿದ್ದೇನೆ? ಸಮಾಜವನ್ನು ಬದಿಗಿಟ್ಟು ವೈಯಕ್ತಿಕ ಬಯಕೆಗಳಿಗೆ ದಾರಿ ಮಾಡಿಕೊಳ್ಳುವುದು ಐದು ದಶಕಗಳ ಹಿಂದೆ ಸಾಧ್ಯವಾಗಿದ್ದರೆ ಈಗೇಕಿಲ್ಲ?

ಇಷ್ಟರಲ್ಲೇ ನನ್ನ ವೈದ್ಯ ಸ್ನೇಹಿತೆಯೊಬ್ಬರು ಪ್ರಶ್ನೆಯೆತ್ತಿದ್ದಾರೆ: ಹೊಸ ದಾರಿ – 78ರ ಕೊನೆಯ ಸಾಲುಗಳು 'ಮುಕ್ತ ಲೈಂಗಿಕತೆ ಅಥವಾ ಅನೈತಿಕ ಸಂಬಂಧಗಳಿಗೆ (ಕಾನೂನು ಪ್ರಕಾರ, ನನ್ನ ಪ್ರಕಾರ ಅಲ್ಲ) ಬೆಂಬಲಿಸಿದಂತೆ ಪ್ರೋತ್ಸಾಹ ಕೊಟ್ಟಂತೆ ಆಗುವುದಿಲ್ಲವೆ?' ಅದಕ್ಕೆ ನನ್ನ ಉತ್ತರ ಸರಳ. ಹನ್ನೆರಡನೆಯ ಶತಮಾನದ ಮಿಥುನ ಶಿಲ್ಪಗಳಲ್ಲಿ ಬಹುಸಂಗಾತಿಗಳ ಜೊತೆಗೆ ರತಿಕೇಳಿ ನಡೆಸುತ್ತಿರುವ ಕೆತ್ತನೆಗಳು ಮುಕ್ತವಾಗಿವೆ. ಆಗ (ಕಲ್ಪನೆಗಾದರೂ ಸರಿ) ಸಮಾಜ ಸ್ವೀಕೃತವಾಗಿದ್ದುದು ಈಗಿಲ್ಲ ಎನ್ನುವುದನ್ನು ಗಮನಿಸಿದರೆ ಒಂದಂಶ ಸ್ಪಷ್ಟವಾಗುತ್ತದೆ: ಕಾಲಕಾಲಕ್ಕೆ ಆಯಾ ಸಾಮಾಜಿಕ ಪರಿಸರಕ್ಕೆ ತಕ್ಕಂತೆ ಹೆಣ್ಣುಗಂಡುಗಳ ಲೈಂಗಿಕ ವರ್ತನೆಯೂ ಬದಲಾಗುತ್ತ ಇರುತ್ತದೆ. ಇನ್ನು, ಲೈಂಗಿಕ ವರ್ತನೆಯ ಬಗೆಗೆ ಕಾನೂನು ಹಾಗೂ ನೈತಿಕತೆ ಎರಡೂ ಒಂದೇ ಹೇಳುತ್ತವೆ: ಯಾವುದೇ ಲೈಂಗಿಕ ವರ್ತನೆಯು ಜವಾಬ್ದಾರಿಯಿಂದ ಕೂಡಿರಬೇಕು, ಆಗುಹೋಗುಗಳ ಹೊಣೆಯನ್ನು ಹೊತ್ತಿರಬೇಕು, ಹಾಗೂ ಖಾಸಗಿಯಾಗಿ ನಡೆಯಬೇಕು. ವಿವಾಹದ ವಿಷಯಕ್ಕೆ ಬಂದಾಗ ಒಂದು ವ್ಯಕ್ತಿಗೆ ಒಬ್ಬರಿಗಿಂತ ಹೆಚ್ಚು ಸಂಖ್ಯೆಯಲ್ಲಿ ಜೀವಂತ ಗಂಡ/ಹೆಂಡತಿ ಇರಕೂಡದು ಎಂಬ ಕಾನೂನು ಇದೆಯೇ ಹೊರತು ಏಕಕಾಲಕ್ಕೆ ಎಷ್ಟೇ ಲೈಂಗಿಕ ಸಂಗಾತಿಗಳಿದ್ದರೂ ಕಾನೂನಿನ ಅಡ್ಡಿಯಿಲ್ಲ – ವಿವಾಹಿತ ಸಂಗಾತಿಯ ಅಡ್ಡಿ ಇಲ್ಲದಿದ್ದರೆ ಆಯಿತು. ಆದರೆ ನಾನು ಮಾತಾಡುತ್ತಿರುವ ವಿಷಯ ಅದಲ್ಲ. ಪ್ರಸ್ತುತ ಸಮಾಜದಲ್ಲಿ ಪುರುಷ ಪ್ರಧಾನ ಕೌಟುಂಬಿಕ ಶೈಲಿಯಿಂದ ಹೆಣ್ಣು ಮುಕ್ತವಾಗಬೇಕಾದರೆ ಗಂಡಿಗೆ ಇರುವ ಸ್ವಾತಂತ್ರ್ಯಸ್ವಾಯತ್ತತೆ ಹೆಣ್ಣಿಗೂ ಇರಬೇಕು; ಹೆಣ್ಣಾಗಲೀ ಗಂಡಾಗಲೀ ಅವರ ಲೈಂಗಿಕತೆಯ ಅಭಿವ್ಯಕ್ತಿಗೆ ಹಾಗೂ ಅದನ್ನು ಅನುಭವಿಸುವುದಕ್ಕೆ ಇಳಿವಯಸ್ಸು ಅಡ್ಡಿಯಾಗಬಾರದು ಎಂದೆನ್ನುತ್ತಿದ್ದೇನಷ್ಟೆ. ಈ ವಿಷಯದಲ್ಲಿ ಯಾವುದೇ ಹೆಣ್ಣು ಕಟ್ಟಿಹಾಕಿದಂತೆ ವರ್ತಿಸುವ ಅಗತ್ಯವಿಲ್ಲ. ಎಲ್ಲರಿಗೂ ಸಮಾನ ಅಧಿಕಾರ ಬಂದಾಗ ಹೇಗೆ ಬಳಸಿಕೊಳ್ಳುತ್ತಾರೆ ಎನ್ನುವುದು ಅವರವರ ಆಯ್ಕೆಗೆ ಬಿಟ್ಟಿದ್ದು.

ಪುರುಷ ಪ್ರಧಾನ ದಾಂಪತ್ಯದಲ್ಲಿ ನಡುವಯಸ್ಸಿನ ತನಕ ಇದ್ದು ನಂತರ (ಗಂಡನಿದ್ದೂ) ಒಂಟಿಯಾದ ಮಹಿಳೆಯರಲ್ಲಿ ಒಂದಂಶ ಗಮನಿಸಿದ್ದೇನೆ. ಇವರ ಲೈಂಗಿಕ ಬದುಕಿನ ಒಟ್ಟಾರೆ ಅನುಭವವನ್ನು ಭಟ್ಟಿಯಿಳಿಸಿದರೆ ಒಂದೇ ಅಭಿಪ್ರಾಯ ತೊಟ್ಟಿಕ್ಕುತ್ತದೆ: "ಗಂಡ ಬಯಸಿದಾಗಲೆಲ್ಲ ಬಹುಶಃ ಒಪ್ಪಿದ್ದೇನೆ. ಅದರಲ್ಲಿ ನನಗೂ ಕೆಲವೊಮ್ಮೆ ಸುಖ ಸಿಕ್ಕಿದೆ." ಇದೇ ಅಭಿಪ್ರಾಯವನ್ನು ಗಂಡು ಹೊಂದುವಂತಾಗಿದ್ದರೆ ದಾಂಪತ್ಯಗಳು ಉಳಿಯುತ್ತಿದ್ದುವೆ? ತಾತ್ಪರ್ಯ ಸ್ಪಷ್ಟವಾಗಿದೆ. ಹೆಣ್ಣಿಗೆ ಒಪ್ಪುವಂತೆ, ಹೆಣ್ಣಿನ ತೃಪ್ತಿಯನ್ನೂ ಉದ್ದೇಶವಾಗಿಟ್ಟುಕೊಂಡು ಕಾಮಕ್ರಿಯೆ ಹೆಚ್ಚಿನಂಶ ನಡೆಯುತ್ತಿಲ್ಲ. ಗಂಡಿಗೆ ಸುಖ ಕೊಡುವಾಗ ತಾನೂ ಸ್ವಲ್ಪ ಉಂಡೆ ಎನ್ನುವುದಕ್ಕೂ, ತನ್ನ ಸುಖವನ್ನು ಹುಡುಕಿಕೊಂಡು ಹೋಗಿ ಪಡೆದುಕೊಂಡೆ ಎನ್ನುವುದಕ್ಕೂ ವ್ಯತ್ಯಾಸವಿದೆ ಎನ್ನುವುದನ್ನು ಎಲ್ಲ ಒಂಟಿ ಹೆಂಗಸರು ಅರ್ಥ ಮಾಡಿಕೊಳ್ಳಬೇಕು.

ಇಲ್ಲಿ ಇನ್ನೊಂದು ದುರಂತದ ಬಗೆಗೆ ಹೇಳಲೇಬೇಕು. ಹಿರಿಯರು ಹುಡುಗನನ್ನು ಆರಿಸುತ್ತಾರೆಂದು ಮುಟ್ಟು ನಿಲ್ಲುವವರೆಗೆ ಕಾಯ್ದು ನಿರಾಶರಾದ ವೃದ್ಧ ಕನ್ಯೆಯರ ಸಂಖ್ಯೆ ನಮ್ಮಲ್ಲಿ ಸಾಕಷ್ಟಿದೆ. ಕಾರಣ? 'ತಕ್ಕ ಹುಡುಗ(?) ಸಿಕ್ಕಿಲ್ಲ, ಹುಡುಕುತ್ತಿದ್ದೇವೆ(!)' ಕೆಲಸ ಕೈಗೂಡದಿದ್ದಾಗ ಕೈಲಾಗದೆಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳದೆ ಉದ್ದೇಶವನ್ನು ದೊಡ್ಡದು ಮಾಡಿ ಮುಂದೆಹಾಕಿದ್ದು ಇಲ್ಲಿ ಎದ್ದುಕಾಣುತ್ತದೆ. ತಮ್ಮ ಜಡ್ಡುಗಟ್ಟುತನದಿಂದ ತಮ್ಮ ಹೆಣ್ಣುಮಕ್ಕಳಿಗೆ ಕಾಮೇಚ್ಛೆ ನೆರವೇರದೆ ಅನ್ಯಾಯವಾಗುತ್ತಿದೆ ಎಂದು ತಾಯ್ತಂದೆಯರಿಗೆ ಅನಿಸುತ್ತಿಯೋ ಹೇಗೆಂದು ಗೊತ್ತಿಲ್ಲ. ಆದರೆ ಇದಕ್ಕೆ ವ್ಯತಿರಿಕ್ತವಾದ ಅನುಭವವನ್ನು ಓದುಗರೊಬ್ಬರು ಇದೀಗ ಹಂಚಿಕೊಂಡಿದ್ದಾರೆ: ಅವರೂರಿನ ತಾಯಿಯಿಲ್ಲದ ಹುಡುಗಿಯೊಬ್ಬಳು ತನ್ನ ಮದುವೆಯಾಗಿ ಒಂದೆರಡು ವರ್ಷಗಳಲ್ಲೇ ತನ್ನ ತಂದೆಗೆ ಮರುಮದುವೆ ಮಾಡಿದ್ದಾಳೆ. ಆ ಎರಡನೇ ಮಹಿಳೆಗೆ ಈ ಹುಡುಗಿಯ ಬಗ್ಗೆ ಇನ್ನಿಲ್ಲದಷ್ಟು ಕೃತಜ್ಞತೆ!

ನಮ್ಮಲ್ಲಿ ಬಳಕೆಯಲ್ಲಿರುವ 'ಕಾಮಕ್ರಿಯೆಯು ಏನಿದ್ದರೂ ವಿವಾಹದ ನಂತರ' ಎನ್ನುವುದು ಕಾಮಕ್ರಿಯೆಗಿರುವ ಸಂತಾನೋತ್ಪತ್ತಿಯ ಪರಿಣಾಮಕ್ಕೆ ಒತ್ತುಕೊಡುತ್ತದೆ. ಹಾಗಾಗಿಯೇ ಕಾಮತೃಪ್ತಿಯಿಲ್ಲದಿದ್ದರೂ ಸಂತಾನ 'ಭಾಗ್ಯ' ಹೊಂದಿ ನರಳುತ್ತಿರುವ ಅಸಂಖ್ಯ ದಾಂಪತ್ಯಗಳನ್ನು ಕಾಣುತ್ತಿದ್ದೇವೆ. ಹೀಗೇಕೆ? ಮಾನವರ ಲೈಂಗಿಕ ವ್ಯವಸ್ಥೆಯು ಸಂಕೀರ್ಣವಾಗಿದೆ. ಇತರ ಪ್ರಾಣಿಗಳಿಗೆ ಸಂತಾನೋತ್ಪತ್ತಿಗೆಂದು ಕೂಡಲು ಬೆದೆಗಾಲ ಇದೆ; ಉಳಿದಂತೆ ಅವು ನಿಷ್ಕಾಮಿಗಳು. ಆದರೆ ಮಾನವರಲ್ಲಿ ಹೆಣ್ಣು ತಿಂಗಳಿಗೊಮ್ಮೆ ಮಾತ್ರ ಗರ್ಭಧರಿಸಲು ಅವಕಾಶವಿದ್ದರೂ ತಿಂಗಳಿಡೀ ಕಾಮೋದ್ರೇಕಗೊಂಡು ಸುಖಪಡಲು ಮನಸ್ಸು ಮಾಡಬಹುದು; ಗಂಡಂತೂ ಸದಾಸಿದ್ಧ. ಹೀಗಾಗಿ, ಕಾಮಸುಖ ಹಾಗೂ ಸಂತಾನೋತ್ಪತ್ತಿ ಇವೆರಡನ್ನು ಪ್ರತ್ಯೇಕಗೊಳಿಸುವುದು ಮಾನವರಲ್ಲಿ ಅನಿವಾರ್ಯ ಅತ್ಯಗತ್ಯ. ಇಲ್ಲದಿದ್ದರೆ ಏನಾಗುತ್ತದೆ ಎನ್ನುವುದರ ಬಗೆಗೆ ವೃದ್ಧ ಕನ್ಯೆಯೊಬ್ಬಳು ನನ್ನಲ್ಲಿ ಹಂಚಿಕೊಂಡಿದ್ದು ಹೃದಯ ವಿದ್ರಾವಕವಾಗಿದೆ. 'ನನಗೆ ಮುಂದಿನ ಜನ್ಮದಲ್ಲಾದರೂ ಬೇಗ ವರ ಸಿಗಲಿ!' ಕಾಮಸುಖಕ್ಕಾಗಿ ಮರುಜನ್ಮ ಬಯಸುವ ಲೋಕಾರೂಢಿಗೆ ಪೂರ್ಣವಿರಾಮ ಹಾಕಲೇಬೇಕು ಎನಿಸುತ್ತದೆ.

ಈ ಸಂದರ್ಭದಲ್ಲಿ ಇಬ್ಬರು ಪ್ರೇಮಿಗಳು ನೆನಪಿಗೆ ಬರುತ್ತಿದ್ದಾರೆ. ಇಬ್ಬರೂ ಮಧ್ಯವಯಸ್ಸಿನ ವಿಚ್ಛೇದಿತರಿದ್ದು, ಮೊದಲ ವಿವಾಹದಿಂದ ಮಕ್ಕಳಿವೆ. ನಿಂತುಹೋದ ಕಾಮಸುಖವನ್ನು ಮರಳಿ ಪಡೆಯಲು ಕಾತುರರಾಗಿದ್ದಾರೆ. ಮುಂಚಿನ ದಾಂಪತ್ಯದಲ್ಲಿ ಕೈಸುಟ್ಟುಕೊಂಡಿದ್ದರಿಂದ ಹೊಸ ಕುಟುಂಬ ಹೂಡಿ, ಹೊಣೆಹೊತ್ತು ಒದ್ದಾಡಲು ಮನಸ್ಸಿಲ್ಲ. ಹೆಣ್ಣಿನ ವೃದ್ಧ ತಂದೆ ಅವರಿಬ್ಬರ ಮನಸ್ಸನ್ನು ಮದುವೆಗೆ ಬದಲಾಯಿಸಲು ನನ್ನ ಸಲಹೆ ಕೇಳಿದರು. ನನ್ನ ಸಲಹೆಯಿಂದ ಖಂಡಿತವಾಗಿಯೂ ಮನಸ್ಸು ಬದಲಾವಣೆ ಆಯಿತು. ಈಗ ವೃದ್ಧರ ಮಹಡಿಯ ಮೇಲಿನ ಕೋಣೆಯು ಪ್ರೇಮಿಗಳಿಗೆ ಮೀಸಲಾಗಿದೆ. ಗಂಡು ಬಂದು ಇರುವಾಗಲೆಲ್ಲ ಇವರು ಮೊಮ್ಮಗುವನ್ನು ನೋಡಿಕೊಳ್ಳುತ್ತಾರೆ! ನೀವೇನಂತೀರಿ? ನಿಸ್ಸಂಕೋಚದಿಂದ ಹೇಳಿಕೊಳ್ಳಿ.

**ಸಂಪರ್ಕಕ್ಕೆ: 8494933888; Email: vinod.chebbi@gmail.com**